ಕ್ರ.ಸಂ. 1 ರಿಂದ 05 ರವರಗಿನ ಗ್ರೂಪ್ 'ಎ' ವರ್ಗದ ಹುದ್ದೆಗಳು ಬಡ್ತಿ ಮೂಲಕ ತುಂಬುವ ಹುದ್ದೆಗಳಾಗಿರುತ್ತವೆ. ಕ್ರ.ಸಂ. 6ರ ಗ್ರೂಪ್ "ಬಿ" ವರ್ಗದ ಸಹಾಯಕ ಸರ್ಕಾರಿ ಅಭಿಯೋಜಕರು –ವ– ಸಹಾಯಕ ಸರ್ಕಾರಿ ವಕೀಲರುಗಳ ಹುದ್ದೆಗಳನ್ನು ಈ ಇಲಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುತ್ತಿದೆ. ಕ್ರ.ಸಂ. 7 ಮತ್ತು 8ರ ಹುದ್ದೆಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮುಖಾಂತರ ಭರ್ತಿ ಮಾಡಬೇಕಾಗಿರುತ್ತದೆ. ಕ್ರ.ಸಂ. 9ರ ಹುದ್ದೆಗಳನ್ನು ಗ್ರೂಪ್ "ಸಿ" ವರ್ಗದ ನೌಕರರಿಗೆ ಬಡ್ತಿ ನೀಡಿ ತುಂಬುವ ಹುದ್ದೆಗಳಾಗಿರುತ್ತವೆ.

ಕ್ರ.ಸಂ. 3ರಲ್ಲಿ ನಮೂದಿಸಿದ ಸರ್ಕಾರಿ ಅಭಿಯೋಜಕರ ವ್ಯಂದದಲ್ಲಿ ಬಹುತೇಕ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳನ್ನು ಕ್ರ.ಸಂ. 4ರಲ್ಲಿ ನಮೂದಿಸಿದ ವ್ಯಂದದ ಅಧಿಕಾರಿಗಳಿಂದ ಬಡ್ತಿ ಮೂಲಕ ತುಂಬಬೇಕಾಗಿದ್ದು, ಈ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 522 ಪಿಪಿಇ 2013, ದಿನಾಂಕ: 3.11.2014ರ ಪ್ರಕಾರ ನೇಮಕಾತಿ ನಿಯಮಗಳಿಗೆ ತಿದ್ದುಪಡಿಯಾಗಿದ್ದು, ಬಡ್ತಿ ನೀಡುವ ಬಗ್ಗೆ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ/ ಬಡ್ತಿಯಿಂದ ಭರ್ತಿ ಮಾಡಬೇಕಾಗಿದ್ದು, ನೇರ ನೇಮಕಾತಿಯಿಂದ ಭರ್ತಿ ಮಾಡಬೇಕಾದ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯ ಹಂತದಲ್ಲಿದೆ. ಕೆಲವು ಶ್ರೀಫ್ರಲಿಪಿಗಾರರ/ಬೆರಳಚ್ಚುಗಾರರ/ ದಲಾಯತ್ ಹುದ್ದೆಗಳನ್ನು ಬಾಹ್ಯಮೂಲದಿಂದ ಭರ್ತಿ ಮಾಡಲಾಗಿದೆ. ಬಡ್ತಿಯಿಂದ ಭರ್ತಿಮಾಡಬೇಕಾದ ಹುದ್ದೆಗಳನ್ನು ಭಾರತ ಸಂವಿಧಾನದ ಅನುಚ್ಛೇದ 371(ಜೆ) ವರ್ಗೀಕರಣದ ನಂತರ ಭರ್ತಿ ಮಾಡಲಾಗುವುದು.

ಸರಗಳ್ಳತನ, ಕೊಲೆ, ದರೋಡೆ

1139 (1910) **ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ (ಅಫ್ಜಲ್‌ಪುರ)(ಕಲಬುರಗಿ ದಕ್ಷಿಣ)** :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) 2012–13 ನೇ ಸಾಲಿನಲ್ಲಿ ಇಲ್ಲಿಯವರೆಗೆ ಕಲಬುರಗಿ ನಗರದಲ್ಲಿ ಎಷ್ಟು ಸರಗಳ್ಳತನ ಪ್ರಕರಣಗಳು ನಡೆದಿವೆ ; (ಮಾಹಿತಿ ನೀಡುವುದು)

(ಆ) ಈ ಪೈಕಿ ಎಷ್ಟು ಪ್ರಕರಣಗಳು ಪತ್ತೆಯಾಗಿವೆ ;

(ಇ) ಈ ನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಎಷ್ಟು ದರೋಡೆ ಹಾಗೂ ಕೊಲೆ ಪ್ರಕರಣಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ? (ಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :–

(ಅ) 2012–13 ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯಲ್ಲಿ ನಡೆದ ಸರಗಳ್ಳತನ ಪ್ರಕರಣಗಳು ಈ ಕೆಳಗಿನಂತಿವೆ.

ವರ್ಷ	ದಾಖಲಾಗದ ಪ್ರಕರಣಗಳು
2012	31
2013	30
2014 (ನವೆಂಬರ್ ವರೆಗೆ)	32

(ಆ) ಪತ್ತೆಯಾಗಿರುವ ಪ್ರಕರಣಗಳ ವಿವರ

ವರ್ಷ	ಪತ್ತೆಯಾದ ಪ್ರಕರಣಗಳು
2012	20
2013	22
2014 (ನವೆಂಬರ್ ವರೆಗೆ)	20

(ಇ) ಕಲಬುರಗಿ ನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ವರದಿಯಾದ ಮತ್ತು ಪತ್ತೆಯಾದ ದರೋಡೆ ಹಾಗೂ ಕೊಲೆ ಪ್ರಕರಣಗಳ ವಿವರ ಈ ಕೆಳಗಿನಂತಿವೆ.

ವರ್ಷ	ಕೊಲೆ		ದರೋಡೆ	
	ವರದಿ	ಪತ್ತೆ	ವರದಿ	ಪತ್ತೆ
2012	23	22	05	04
2013	25	22	10	8
2014 (ನವೆಂಬರ್ ವರೆಗೆ)	15	15	03	02

(ಈ) ಕೈಗೊಂಡ ಕ್ರಮಗಳು :

ಸದರಿ ಪ್ರಕರಣಗಳು ತಡೆಯುವ ಬಗ್ಗೆ ಮುಂಜಾಗೃತ ಕ್ರಮವಾಗಿ ಕಲಬುರಗಿ ನಗರದ ಪ್ರಮುಖ ಸ್ಥಳಗಳಲ್ಲಿ ಈಗಾಗಲೆ ಸಿಸಿ ಕ್ಯಾಮರಾ ಅಳವಡಿಸಿದ್ದು, ನಗರದ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಟವೆರಾ ವಾಹನಗಳಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಗಸ್ತು, ಪೆಟ್ರೋಲಿಂಗ್ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ. ಅಲ್ಲದೇ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಮೊಹಲ್ಲಾ ಸಭೆ ಹಾಗೂ ಜನ ಸಂಪರ್ಕ ಸಭೆಗಳನ್ನು ಆಯೋಜಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದು. ಹಾಗೂ ಹಗಲು ಮತ್ತು ರಾತ್ರಿ ಗಸ್ತು ಕುರಿತು ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ನಿಯೋಜಿಸಿ ಈ ರೀತಿ ಘಟನೆಗಳು ಜರುಗುದಂತೆ ಸೂಕ್ತ ನಿಗಾವಹಿಸಿಕೊಂಡು ಬರಲಾಗುತ್ತಿದೆ.

ವಿದ್ಯುತ್ ಟೆಂಡರ್ ಗುತ್ತಿಗೆ

1140 (1911) **ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ (ಅಪ್ಪು ಗೌಡ)(ಕಲಬುರಗಿ ದಕ್ಷಿಣ)** :–ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

(ಅ) ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಟೆಂಡರ್ ಕರೆದು ವಿದ್ಯುತ್ ನಿರ್ವಹಣೆ ನಿರ್ವಹಿಸಲಾಗುತ್ತಿದ್ದು ಟೆಂಡರ್ ಅವಧಿ ಮುಗಿದು ಸುಮಾರು 2 ವರ್ಷಗಳು ಗತಿಸಿದರೂ ಹಳೆಯ ಗುತ್ತಿಗೆದಾರರೇ ಈ ಕೆಲಸವನ್ನು ನಿರ್ವಹಿಸುತ್ತಾ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರು ಸರ್ಕಾರದ ನಿಯಮ ಹಾಗೂ ಕೆ.ಟಿ.ಪಿ.ಪಿ ಕಾಯ್ದೆಯನ್ನು ಗಾಳಿಗೆ ತೂರಿ ಗುತ್ತಿಗೆದಾರರ ಹಿತಾಸಕ್ತಿ ಕಾವಾಡಲು ಈ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಹಾಗಿದ್ದಲ್ಲಿ, ಈ ಬಗ್ಗೆ 3ನೇ ತನಿಖಾ ಸಂಸ್ಥೆಯಿಂದ ತನಿಖೆ ಮಾಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದು ಅಥವಾ ಲೋಕಾಯುಕ್ತರವರಿಗೆ ವಹಿಸುವ ಉದ್ದೇಶ ಸರ್ಕಾರಕ್ಕಿದೆಯೇ ? (ಮಾಹಿತಿ ನೀಡುವುದು)

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು) :–

(ಅ) ಬಂದಿದೆ.

(ಆ) ಸರ್ಕಾರದ ನಿಯಮ ಹಾಗೂ KTPP ಕಾಯ್ದೆಯನ್ನು ಗಾಳಿಗೆ ತೂರಿ ಗುತ್ತಿಗೆದಾರರ ಹಿತಾಸಕ್ತಿ ಕಾಪಾಡುವಂತೆ ಯಾವುದೇ ಕೆಲಸ ಮಾಡಿರುವುದಿಲ್ಲ.

ಕಲಬುರಗಿ ನಗರದ ವಿಭಾಗ ಸಂಖ್ಯೆ 1 ರಿಂದ 20 ಹಾಗೂ 50 ರಿಂದ 55ರ ವ್ಯಾಪ್ತಿಯಲ್ಲಿ ಬರುವ ಬೀದಿ ದೀಪಗಳ ನಿರ್ವಹಣೆಗಾಗಿ ಪಾಲಿಕೆ ಕಾರ್ಯಾಲಯದಿಂದ ಗುಮಪಾ/ಕಾಪಾಅ/ಡಿಬಿ/